(ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠದಲ್ಲಿ)

ಶ್ರೀ ಎಚ್.ಕೆ. ಪಾಟೀಲ್: ಅಧ್ಯಕ್ಷರೇ ಈಗಾಗಲೇ ಮಾನ್ಯ ಜಗದೀಶ ಶೆಟ್ಟರ್, ಗೋವಿಂದ ಕಾರ್ಜೋಳ, ಯಡಿಯೂರಪ್ಪ, ಮಾಧುಸ್ವಾಮಿ, ವಾಟಾಳ್ ನಾಗರಾಜ್, ಶ್ರೀರಾಮರೆಡ್ಡಿ, ಅರಗ ಜ್ಞಾನೇಂದ್ರ, ರಾಯರೆಡ್ಡಿ, ವಿಶ್ವೇಶ್ವರ ಹೆಗಡೆ, ಪಾಪರೆಡ್ಡಿ, ವೈಜನಾಥ ಪಾಟೀಲ್ ಸ್ನೇಹಿತ ರವಿ ಇವರೆಲ್ಲರೂ ಸಾಕಷ್ಟು ವಿವರವಾಗಿ ಚರ್ಚೆ ಮಾಡಿದ್ದಾರೆ ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ನಮ್ಮ ಜಲಸಂಪನ್ಮೂಲ ಸಚಿವರು ಈಗಾಗಲೇ ತಮ್ಮೆದುರಿಗೆ ಹಂಚಿಕೆ ಮಾಡಿಕೊಂಡ ಹಾಗೆ ಇದು ಅತ್ಯಂತ ಗಂಭೀರವಾಗಿರತಕ್ಕ ವಿಚಾರ, ರಾಜ್ಯದ ಹಿತ ರಕ್ಷಣೆ ಮಾಡುವುದಕ್ಕೆ, ಕಾಪಾಡುವುದಕ್ಕೆ ಹೇಗೆ ನಾವು ಹೆಜ್ಜೆಗಳನ್ನು ಇಡಬೇಕು, ಕಾನೂನು ರೀತಿಯಾಗಿ ಏನು ಕೆಲಸವನ್ನು ಮಾಡಬಹುದು? ರಾಜಕೀಯವಾಗಿ ಏನು ಒತ್ತಡವನ್ನು ತರುವಂಥ ಕೆಲಸವನ್ನು ಮಾಡಬೇಕು, ಕಾನೂನು ಉಲ್ಲಂಘನೆ ಮಾಡತಕ್ಕ ಈ ಮನೋಭಾವದಲ್ಲಿ ಆ ಪ್ರವೃತ್ತಿಯಲ್ಲಿ ಇದ್ದಂಥ ಈ ನೀರಿನ ವಿಚಾರದಲ್ಲಿ ಆಂಧ್ರಸರ್ಕಾರಕ್ಕೆ ಯಾವ ರೀತಿಯಾಗಿ ನಾವು ಆ ಕಾನೂನು ಉಲ್ಲಂಘನೆಯನ್ನು ಮಾಡಬೇಡಿ ನಿಯಮ ಉಲ್ಲಂಘನೆ ಮಾಡಬೇಡಿ ಮತ್ತೊಬ್ಬರ ನೀರನ್ನು ಬಳಕೆ ಮಾಡಿಕೊಳ್ಳಬೇಡಿ ಹಾಗೆ ಎಂದು ಹೇಳಿ ಅವರಿಗೆ ಯಾವ ರೀತಿಯಾಗಿ ತಿಳಿವಳಿಕೆಯನ್ನು ಕೊಡಬೇಕೆನ್ನುವುದರ ಬಗ್ಗೆ ಒಂದು ಸಮಗ್ರವಾಗಿರತಕ್ಕಂಥ ಹೇಳಿಕೆಯನ್ನು ಮಾಡುತ್ತೇವೆ ಎನ್ನುವಂಥ ಮಾತನ್ನು ಅವರು ಹೇಳತಕ್ಕಂದದ್ದರ ಹಿನ್ನೆಲೆಯಲ್ಲಿ ನಾನು ಈ ಸಂದರ್ಭದಲ್ಲಿ ಹೆಚ್ಚು ಮಾತನಾಡುವುದಿಲ್ಲ. ಸ್ಟೇಟ್‌ಮೆಂಟ್ ಆದ ಮೇಲೆ ಮತ್ತೆ ಅವಶ್ಯ ಇದ್ದರೆ ನಾವು ಅವರೂ ಚರ್ಚೆಯಲ್ಲಿ ಪಾಲುಗೊಳ್ಳುತ್ತೇವೆ.

ಶೂನ್ಯವೇಳೆ

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ):– ಮಾನ್ಯ ಉಪಾಧ್ಯಕ್ಷರೇ, ನನ್ನದು ಶೂನ್ಯವೇಳೆಯಲ್ಲಿ ಎರಡು ವಿಚಾರಗಳಿವೆ. ಒಂದು, ಬೆಂಗಳೂರು ವಿಶ್ವವಿದ್ಯಾನಿಲಯಕ್ಕೆ ಅಕಾಡೆಮಿ ಸದಸ್ಯರನ್ನು ನೇಮಕ ಮಾಡಿರುವುದರ ಬಗ್ಗೆ ಪತ್ರಿಕೆಗಳಲ್ಲಿ ಹಲವಾರು ಹೇಳಿಕೆಗಳು ಬಂದಿವೆ. ವಿಶ್ವವಿದ್ಯಾನಿಲಯದ ಅಕಾಡೆಮಿ ಎಂದು ಹೇಳಿದರೆ ಅದೊಂದು ಬಹಳ ಪವಿತ್ರವಾದ ಒಂದು ಸಂಸ್ಥೆ. ಇಡೀ ವಿಶ್ವವಿದ್ಯಾನಿಲಯದ ಶೈಕ್ಷಣಿಕ ಗುಣಮಟ್ಟ, ಮತ್ತು ಆದರೆ ಇದನ್ನು ತೀರ್ಮಾನ ಮಾಡತಕ್ಕಂಥ ಒಂದು ಸಂಸ್ಥೆ. ಅಲ್ಲಿ ಅಕಾಡೆಮೀಶಿಯೆನ್ಸ್ ಮಾತ್ರ ಇರತಕ್ಕಂಥದ್ದು

ಇದುವರೆಗೂ ಬಂದಿರತಕ್ಕಂಥ ಪರಿಪಾಠ ಮತ್ತು ಆಕ್ಟ್ ನಲ್ಲಿರತಕ್ಕದ್ದು ಕೂಡ ಹೌದು. ಅಕ್ಟ್ ಕೂಡ ಬಾರಿ ಸ್ಪಷ್ಟವಾಗಿ ಹೇಳುತ್ತದೆ. ಯಾವುದೇ ವಿಶ್ವವಿದ್ಯಾನಿಲಯ ಅಕಾಡೆಮಿಗೆ ನಾಮಿನೇಷನನ್ನು ಮಾಡಬೇಕಾದರೆ ಅ ಫೀಲ್ಡ್ ನಲ್ಲಿ ಆ ಶೈಕ್ಷಣಿಕ ವಿಭಾಗದಲ್ಲಿ ಮತ್ತು ಹೈ ಅಕಾಡೆಮಿಕ್ ಕ್ವಾಲಿಟಿ ಇರತಕ್ಕಂಥ ಜನರನ್ನೆ ನೇಮಕ ಮಾಡಬೇಕೆಂದು ಹೇಳತಕ್ಕಂದದ್ದು ಕೂಡ ಆಕ್ಟ್ ಬಾರಿ ಸ್ಪಷ್ಟವಾಗಿ ಹೇಳುತ್ತದೆ. ಆದರೆ ಆ ಆಕ್ಟ್‌ನ್ನು ಉಲ್ಲಂಘನೆ ಮಾಡಿ ಹಲವಾರು ಅಕಾಡೆಮಿಯ ಇತಿಹಾಸವೇ ಇಲ್ಲದೆ ಇರತಕ್ಕಂಥವರನ್ನು ಮತ್ತು ಆ ಆಕಾಡೆಮಿ ಕ್ವಾಲಿಫಿಕೇಷನ್ ಅದರ ಕ್ವಾಲಿಟಿ ಇಲ್ಲದೇ ಇರತಕ್ಕಂಥವರನ್ನು ನೇಮಕ ಮಾಡಿರುವುದು ಇವತ್ತು ಬಹಿರಂಗ ಚರ್ಚೆಗೆ ಒಳಪಟ್ಟಿದೆ. ಈ ಬಹಿರಂಗ ಚರ್ಚೆಗೆ ಒಳಪಟ್ಟಿರುವ ಕಾರಣಕ್ಕೋಸ್ಕರ ಈ ರೀತಿ ನೇಮಕಗಳನ್ನು ಮಾಡಿದರೆ ಯಾವುದೇ ಘನತೆ ಗೌರವ ವಿಶ್ವವಿದ್ಯಾನಿಲಯದ ಅಕಾಡೆಮಿ ಕೌನ್ಸಿಲ್‌ಗಳಿಗೆ ಉಳಿಯುವುದಿಲ್ಲ. ಆದ್ದರಿಂದ ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ಕೇಳತಕ್ಕಂಥದ್ದು ಇಷ್ಟೆ. ಅದನ್ನು ರದ್ದು ಮಾಡಬೇಕು. ನೀವೇನು ಮಾಡಿದ್ದೀರಿ, ಅದನ್ನು ರದ್ದು ಮಾಡಬೇಕು. ಹೈಯ್ಲಿ ಅಕಾಡೆಮಿಕ್ ಕ್ವಾಲಿಫಿಕೇಷನ್ ಇರತಕ್ಕಂಥ ಯಾರೂ ಕೂಡ ಪ್ರಶ್ನೆ ಮಾಡದೇ ಇರುವ ಪ್ರಶ್ನಾತೀತರಾಗಿರತಕ್ಕಂಥ ಬುದ್ಧಿಜೀವಿಗಳನ್ನು ಶೈಕ್ಷಣಿಕ ವ್ಯಕ್ತಿಗಳನ್ನು, ಶಿಕ್ಷಣ ತಜ್ಞರನ್ನು ಅದಕ್ಕೆ ನೇಮಕ ಮಾಡಬೇಕು. ಈಗೇನು ನೀವು ನೇಮಕ ಮಾಡಿದ್ದೀರಿ, ವ್ಯಾಪಾರಸ್ಥರನ್ನು ಕೂಡ ಯಾರು ಯಾರನ್ನೋ ಮಾಡಿದ್ದೀರಿ. ಇನ್ನೊಂದು, ನಮ್ಮ ಶಾಸಕರನ್ನು ಅಕಾಡೆಮಿ ಕೌನ್ಸಿಲ್‌ಗೆ ನೇಮಕ ಮಾಡಬಾರದು. ಬೇಕಾದರೆ ನೀವು ಸಿಂಡಿಕೇಟ್ ಗೆ ಮಾಡಿಕೊಳ್ಳಿ. ತೊಂದರೆ ಇಲ್ಲ. ಆದರೆ ಅಕಾಡೆಮಿ ಕೌನ್ಸಿಲ್‌ಗೆ ಶಾಸಕರನ್ನು ನೇಮಕ ಮಾಡತಕ್ಕದ್ದು. ಅಕಾಡೆಮಿಯ ವಿಚಾರವೆ ಗೊತ್ತೇ ಇಲ್ಲದೇ ಇರತಕ್ಕಂಥ ವಿಶ್ವವಿದ್ಯಾನಿಲಯಗಳ ಅಕಾಡೆಮಿ ಸ್ಟಾಂಡರ್ಡ್ ಬಗ್ಗೆ ಗೊತ್ತೇ ಇಲ್ಲದೇ ಇರುವವರನ್ನು ನೇಮಕ ಮಾಡತಕ್ಕದ್ದು ಸರಿಯಲ್ಲ. ಈಗೇನು ನೇಮಕ ಮಾಡಿದ್ದೀರಿ, ಅದನ್ನು ತಕ್ಷಣ ವಾಪಸ್ ಪಡೆದು ಬೇರೆ ಉನ್ನತವಾದ ಇತಿಹಾಸ ಹೊಂದಿರತಕ್ಕಂಥವರನ್ನು ನೇಮಕ ಮಾಡಬೇಕೆನ್ನುವುದು ಒಂದು. ಮಾನ್ಯ ನೀರಾವರಿ ಸಚಿವರು ಇಲ್ಲಿಯೇ ಇದ್ದಾರೆ ಮತ್ತೊಂದು ವಿಚಾರವನ್ನು ನಾನು ಪ್ರಸ್ತಾಪ ಮಾಡಲಿಕ್ಕೆ ಇರತಕ್ಕಂಥದ್ದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:– ಮಾನ್ಯ ಉಪಾಧ್ಯಕ್ಷರೇ, ಎಜುಕೇಷನ್ಸ್‌ನಲ್ಲಿ ಪೊಲಿಟಿಷಿಯನ್ಸ್ ಕೆಲವು ಜನ ಎಕ್ಸ್‌ಪರ್ಟ್ಸ್ ಇರುತ್ತಾರೆ ಇಲ್ಲ ಎಂದು ಇಲ್ಲ. ಆರ್ಥಿಕ ತಜ್ಞರು ಇರುತ್ತಾರೆ. ಎಜುಕೇಷನಲಿಸ್ಟ್‌ಗಳು ಇರುತ್ತಾರೆ. ಅವರನ್ನು

ಅಲ್ಲಿಗೆ ಹಾಕಬೇಡಿ ಎಂದರೆ ಹೇಗೆ? ಇಲ್ಲದಿದ್ದರೆ ಮನೋಹರ ಜೋಷಿಯವರು ತುಂಬಿದಂಗೆ ತುಂಬಿದರೆ ಹೇಗೆ? ಆಗ ಅವೆಲ್ಲಾ ಏನಾಗುತ್ತದೆ? ಆಗ ಎಂಥ ಸಿಲಬಸ್ ಬರುತ್ತದೆ?

ಶ್ರೀ ಬಿ.ವಿ. ಶ್ರೀರಾಮರೆಡ್ಡಿ:– ನಾನು ಹೇಳಿದ್ದು ಶಾಸಕರನ್ನು ಹಾಕಬೇಡಿ ಎಂದು ಹೇಳಿದೆ. ಅರ್ಥಶಾಸ್ತ್ರಜ್ಞರನ್ನು ಹಾಕಬೇಡಿ ಎಂದು ನಾನು ಹೇಳಲಿಲ್ಲ. ನೀವು ಕನ್ ಫ್ಯೂಸ್ ಮಾಡಬೇಡಿ. ಸಿಂಡಿಕೇಟ್ ಗೆ ನೀವು ಬೇಕಾದರೆ ನಾಮಕರಣವನ್ನು ಮಾಡಿ. ನಾವು ಬೇಡ ಎಂದು ಹೇಳುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ನಮ್ಮಲ್ಲಿ ರೈತ ಮುಖಂಡರು ಇದ್ದಾರೆ. ರೈತರು ಇದ್ದಾರೆ. ಆದರೆ ನೇಗಿಲನ್ನು ಒಂದು ದಿವಸವೂ ಯಾರೂ ಕೈಯಲ್ಲಿ ಹಿಡಿದಿಲ್ಲ. ಕುರುಪಿ ಹಿಡಿದಿಲ್ಲ. ಗುದ್ದಲಿ ಹಿಡಿದಿಲ್ಲ. ಸಲಿಕೆ ಹಿಡಿದಿಲ್ಲ. ಆದರೂ ಕೂಡ ನಾವು ರೈತರೇ. ಹೌದಲ್ಲ ಅರೆ, ನಾವು ನೋಡಿದ್ದೇವಲ್ಲ. ಇನ್ನೊಬ್ಬರಿಂದ ಮಾಡಿಸುತ್ತಾರೆಯೇ ಹೊರತಾಗಿ ಅವರು ಮಾಡುವುದಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:– ನಾನು ಅದರ ಬಗ್ಗೆ ಚರ್ಚೆ, ವಾದಕ್ಕೆ ನಿಮ್ಮ ಹತ್ತಿರಕ್ಕೆ ತರುತ್ತಿಲ್ಲ. ಮತ್ತೆ ಇನ್ನೊಂದು ವಿಚಾರ ಹೇಳಿಬಿಡುತ್ತೇನೆ. ಅನಂತರ ತಾವು ಉತ್ತರ ಕೊಟ್ಟುಬಿಡಿ.

ಶ್ರೀ ಜೆ.ಸಿ. ಮಾಧುಸ್ವಾಮಿ:– ಹೇಳುವವರಿಗೆ ಆರಾಣೆ, ಮಾಡುವವರಿಗೆ ಮೂರಾಣೆ ಏಕೆ ಕೂಲಿಯನ್ನು ಕೊಡುವುದು ಹೇಳಿ. ಹೇಳುವವನು ಮಾಡುವವನಿ ಗಿಂತ ಹತ್ತು ಪಟ್ಟು ಬುದ್ಧಿವಂತನಿರುತ್ತಾನೆ. ನೀವು ಮಾಡುವ ಮಿಸ್ಟೇಕ್ ಎಲ್ಲಾ ತಿದ್ದುತ್ತಾನೆ ಎಂದು ಹೇಳುವವನೇ ಬುದ್ಧಿವಂತನಲ್ಲವಾ? ಅದಕ್ಕೆ ಅವನಿಗೆ ಆರಾಣಿ ಕೂಲಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:– ಮತ್ತೆ ಇನ್ನೊಂದು ವಿಚಾರ, ನಾರಾಯಣಪುರ ಎಡದಂಡೆ ಕಾಲುವೆಯಲ್ಲಿ ಏಪ್ರಿಲ್ ವರೆಗೂ ನೀರು ಬಿಡುವುದು ಎನ್ನುವ ಕಾರಣಕ್ಕೋಸ್ಕರ ಸರ್ಕಾರ ಒಂದು ತೀರ್ಮಾನವನ್ನು ತೆಗೆದುಕೊಂಡಿದೆ. ಏಪ್ರಿಲ್ ನಂತರ ನೀರನ್ನು ಬಿಡುವುದಿಲ್ಲ ಎಂದು. ಆ ನೀರನ್ನು ಬಿಡದೆ ಹೋದರೆ 553 ಕೋಟಿ ರೂಪಾಯಿ ಬೆಳೆ ನಷ್ಟವಾಗುತ್ತದೆ. ನಾರಾಯಣಪುರ ಎಡದಂಡೆ ಕಾಲುವೆಯಲ್ಲಿ ಅದರಲ್ಲಿ ಶೇಂಗಾವನ್ನು 40 ಸಾವಿರ ಎಕರೆಯಲ್ಲಿ ಬೆಳೆದಿದ್ದಾರೆ. ಅದು 20 ಕೋಟಿ ರೂಪಾಯಿ ಬೆಲೆಯಾಗುತ್ತೆ. ಹತ್ತಿಯನ್ನು ಒಂದು ಲಕ್ಷ ಎಕರೆಯಲ್ಲಿ ಬೆಳೆದಿದ್ದಾರೆ. ಅದು ನೂರು ಕೋಟಿ ರೂಪಾಯಿಯಾಗುತ್ತೆ. ಮೆಣಸಿನಕಾಯಿ 50 ಸಾವಿರ ಒಟ್ಟು 553 ಕೋಟಿ ನಷ್ಟವಾಗುತ್ತದೆ. ಆದರೆ ದಯವಿಟ್ಟು ನಾನು ಸರ್ಕಾರಕ್ಕೆ ತಮ್ಮ ಮುಖಾಂತರ ಹೇಳುತ್ತಿದ್ದೇನೆ, ಏಪ್ರಿಲ್ ಕೊನೆಯವರೆಗೂ ನಾರಾಯಣಪುರ ಎಡದಂಡೆ ಕಾಲುವೆಯಲ್ಲಿ ನೀರನ್ನು ಬಿಡಬೇಕು. ಅಲ್ಲಿನ ರೈತರನ್ನು ರಕ್ಷಣೆ ಮಾಡಬೇಕು. ಇಲ್ಲದಿದ್ದರೆ ಬೆಳೆ ನಾಶವಾಗುತ್ತದೆ. ಇಲ್ಲದಿದ್ದರೆ 550 ಕೋಟಿ ರೂಪಾಯಿಗಳು ನಷ್ಟವಾಗುತ್ತದೆ ಎನ್ನತಕ್ಕಂಥದ್ದನ್ನು ತಮ್ಮ ಮುಖಾಂತರ ನಾನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ.